# ಹೊಸ ಸೃಷ್ಟಿ

ಜೂನ್‌ಜುಲೈ ಬಂದಿತ್ತು
ಭುವಿಯ ತುಂಬಾ ಹಸಿರು
ಒಳಗುಹೊರಗು ಆಹ್ಲಾದ
ಜೀವನದಿಗಾಯ್ತು ಉಸಿರು

ಆಗಸ್ಟ್‌ಸೆಪ್ಟೆಂಬರ್ ಬಂದಿತ್ತು
ಮಳೆ ಸುರಿದು ನೀರಾಯ್ತು
ಬೆಳೆ ತರಕಾರಿ ಬೆಳೆಯುತ್ತಿರಲು
ಬಾಳ ಬರವು ದೂರಾಯ್ತು

ಅಕ್ಟೋಬರ್‌ನವೆಂಬರ್ ಬಂದಿತ್ತು
ದೀಪಾವಳಿ ಬೆಳಕು ಹರಡಿತ್ತು
ಸುತ್ತ ಸುಳಿದು ನೋಡುತ್ತಿರಲು
ಚಳಿಯು ಮೆಲ್ಲನೆ ಇಣುಕಿತ್ತು

ಡಿಸೆಂಬರ್‌ಜನವರಿ ಬಂದಿತ್ತು
ಮೈಮನಗಳಲ್ಲಿ ತಂಪೇರಿತ್ತು
ಬಿಸಿಗೆ ಮೈ ಒಡ್ಡಲು ಕಾತರಿಸಿತ್ತು
ತೋಟದ ಹೂಗಳಲ್ಲಿ ಕಂಪೇರಿತ್ತು

ಫೆಬ್ರುವರಿಮಾರ್ಚ್ ಬಂದಿತ್ತು
ಬಿಸಿಲು ವಿರಾಟ್ ರೂಪ ತಾಳಿತ್ತು
ಎಲ್ಲರೆದೆಗಳಲ್ಲಿ ಧಗೆ ಹಬ್ಬಿಸುತ
ತನ್ನದೇ ಸಾಮ್ರಾಜ್ಯ ಎಂದ್ಹೇಳಿತ್ತು

ಏಪ್ರಿಲ್‌ಮೇ ಬಂದಿತ್ತು
ವಸಂತ ರಾಜ ಬಂದಿದ್ದನು
ಮರಗಿಡಗಳಲ್ಲಿ ಚೈತನ್ಯ ನೀಡಿ
ಹೊಸ ಸೃಷ್ಟಿಗೆ ನಾಂದಿ ಹಾಡಿದನು

**ಎಂ.ಜಿ.ದೇಶಪಾಂಡೆ**



# ಗುರುತು ಸಿಕ್ಕ ಚಕ್ರವರ್ತಿ

ಬೀರಬಲ್ಲನು ಪ್ರಪಂಚದಲ್ಲೆಲ್ಲಾ ಅತ್ಯಂತ ಬುದ್ಧಿವಂತನೂ ಚಾಣಾಕ್ಷನೂ ಆಗಿರುವನೆಂದು ಎಲ್ಲ ರಾಜ್ಯಗಳಲ್ಲೂ ವದಂತಿ ಹಬ್ಬಿತ್ತು. ಇದನ್ನು ಪರೀಕ್ಷಿಸಬೇಕೆಂದು ರೋಮಿನ ಚರ್ಕವರ್ತಿ ಬೀರಬಲ್ಲನಿಗೆ ಆಹ್ವಾನ ಕಳುಹಿಸಿದ.

ಬೀರಬಲ್ಲ ಅಕ್ಬರನ ಮುಂದೆ ನಿಂತು 'ಮಹಾಪ್ರಭು, ರೋಮನ್ನು ನೋಡ್ಬೇಕು ಅಂತ ನಂಗೆ ಆಸೆಯಾಗುತ್ತಿದೆ. ಆ ದೇಶವನ್ನು ಕಂಡು ಅಲ್ಲಿರೋರಿಗೆ ನಮ್ಮ ಬುದ್ಧಿಶಕ್ತಿ ತೋರಿಸುವುದರ ಜೊತೆಗೆ ಅವರ ರಾಜ್ಯ ನಿರ್ವಹಣೆಯ ವಿಧಾನವನ್ನು ಅಭ್ಯಾಸ ಮಾಡಿಕೊಂಡು ಬರುತ್ತೇನೆ' ಎಂದು ಕೇಳಿದ.

ಅಕ್ಬರನು ಬೀರಬಲ್ಲನ ಪ್ರವಾಸಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಿ ಸಂತೋಷದಿದ ಅವನನ್ನು ಬೀಳ್ಕೊಟ್ಟ.



ಬೀರಬಲ್ಲನನ್ನು ನೋಡಲು ರೋಮ್ ನಗರದ ಬೀದಿಗಳಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಅವನು ಅರಮನೆಯ ಬಳಿಗೆ ಬಂದಾಗ ರೋಮಿನ ಚರ್ಕವರ್ತಿ ತನ್ನ ಮಂತ್ರಿ ಹಾಗೂ ಸೇನಾಪತಿಗಳಿಗೆ ತನ್ನಂತೆಯೇ ಉಡುಪು ತೊಟ್ಟು ಒಂದೇ ರೀತಿಯ ಆಸನಗಳ ಮೇಲೆ ಮಂಡಿಸುವಂತೆ ಹೇಳಿದ.

'ಅವನು ಬಹಳ ಬುದ್ಧಿವಂತನಂತೆ. ಒಂದೇ ರೀತಿ ಕಾಣುವವರ ಗುಂಪಿನಲ್ಲಿ ನನ್ನನ್ನು ಅವನು ಹೇಗೆ ಗುರುತಿಸುತ್ತಾನೆ ನೋಡೋಣ' ಎಂದ.

ಎಲ್ಲರೂ ಕುಳಿತುಕೊಳ್ಳುವ ಹೊತ್ತಿಗೆ ಬೀರಬಲ್ಲ ಆಸ್ಥಾನದ ಬಳಿಗೆ ಬಂದ. ಒಂದೇ ಬಗೆಯ ಉಡುಪು ತೊಟ್ಟು ಒಂದೇ ರೀತಿ ಕುಳಿತಿರುವವರನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಆದರೆ ಧೈರ್ಯಗೆಡದೆ ಅವನು ಅವರನ್ನೆಲ್ಲಾ ಸೂಕ್ಷ್ಮವಾಗಿ ಅವಲೋಕಿಸಿದ. ಅನಂತರ ಒಬ್ಬನ ಮುಂದೆ ಬಂದು 'ಚರ್ಕವರ್ತಿಗಳಿಗೆ ನಮಸ್ಕಾರ' ಎಂದು ತಲೆಬಾಗಿದ.

ಅವನೇ ರೋಮಿನ ಚರ್ಕವರ್ತಿಯಾಗಿದ್ದ. ಆತ ವಿಸ್ಮಯದಿಂದ 'ನೀನು ನನ್ನನ್ನು ಹೇಗೆ ಗುರುತಿಸಿದೆ?' ಎಂದು ಕೇಳಿದ.

ಬೀರಬಲ್ಲ ಮುಗುಳುನಕ್ಕು ನುಡಿದ, ' ಅದು ಬಹಳ ಸುಲಭದ ಕೆಲಸ. ಬೇರೆಲ್ಲರೂ ಆಶ್ಚರ್ಯದಿಂದ ನನ್ನನ್ನೇ ನೋಡುತ್ತಿದ್ದರು. ನೀವೊಬ್ಬರು ಮಾತ್ರ ನಾನು ನಿಮ್ಮನ್ನು ಗುರುತಿಸಬಾರದೆಂದು ಬೇರೆಲ್ಲೋ ನೋಡುತ್ತಿದ್ದಿರಿ'.

ಚರ್ಕವರ್ತಿ ಮೆಚ್ಚಿ ಬೀರಬಲ್ಲನಿಗೆ ಬಹುಮಾನ ಮತ್ತು ಬೆಲೆ ಬಾಳುವ ಉಡುಗೊರೆಗಳನ್ನು ನೀಡಿದ.

**ಮಹೇಶ್ ಎಸ್. ಹೆಚ್., ಕೊಟ್ಟೂರು**